ಕರ್ನಾಟಕ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯ ಕಿರು ಹೊತ್ತಿಗೆಯೊಂದನ್ನು ಬಿಟ್ಟರೆ ಇಂಥ ಪ್ರಮಾಣದ ಈ 'ವಾಙ್ಮಯಪ್ರವಾಹ' ಗ್ರಂಥವೇ ದಿ. ಪ್ರಭುಲಿಂಗಯ್ಯ ಮಲ್ಲಾಪೂರ ಅವರ ಪ್ರಥಮ ಕೃತಿ. ಪ್ರೊ. ಪ್ರಭುಲಿಂಗಯ್ಯನವರು ೫೨ ವರ್ಷಗಳ ಮಧ್ಯಮ ವಯಸ್ಸಿನಲ್ಲೆ ಆಕಸ್ಮಿಕವಾಗಿ ಮೆದುಳು ರೋಗಕ್ಕೆ ಬಲಿಯಾದುದು ದುರ್ದೈವದ ಸಂಗತಿ.



ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಆರ್ಟ್ಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಮಲ್ಲಾಪೂರ ಅವರು ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿದ್ದರು. ಅವರೊಬ್ಬ ಉಚ್ಚಮಟ್ಟದ ಪಂಡಿತರೂ ವಾಗ್ಮಿಗಳೂ ಆಗಿದ್ದರು. ಬದುಕಿನುದ್ದಕ್ಕೂ ಅವರು ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘ ಮತ್ತು ಜಿಲ್ಲಾ ಸಾಹಿತ್ಯ ಪರಿಷತ್ತುಗಳಂಥ ಸಂಸ್ಥೆಗಳೊಡನೆ ಕ್ರಿಯಾತ್ಮಕ ಸಂಬಂಧವನ್ನಿರಿಸಿಕೊಂಡಿದ್ದರು. ಜಿಲ್ಲಾ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ಶರಣ ಸರೋಜ'ವು ಅವರ ಸಂಪಾದನಾ ಸಾಮರ್ಥ್ಯಕ್ಕೆ ಒಂದು ದಾಖಲೆಯಾಗಿದೆ. ಅವರ ಹಲವು ಲೇಖನಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ; ಇನ್ನೂ ಅನೇಕ ಅಪ್ರಕಟಿತ ಲೇಖನಗಳು ಬೆಳಕು ಕಾಣಬೇಕಾಗಿದೆ. ಪ್ರಭುಲಿಂಗಯ್ಯನವರ ವ್ಯಕ್ತಿತ್ವವನ್ನು ನೆನಿಸಿಕೊಂಡು ಸೇಡಂನ ನೃಪತುಂಗ ಅಧ್ಯಯನ ಸಂಸ್ಥೆಯು ಅವರ ಕೆಲವು ಲೇಖನಗಳ ಸಂಗ್ರಹ ಈ 'ವಾಙ್ಮಯ ಪ್ರವಾಹ' ಕೃತಿಯನ್ನು ಹೊರತರುತ್ತಿರುವುದು ಹೆಮ್ಮೆಯ ವಿಷಯ. ಈ ಗ್ರಂಥದಲ್ಲಿ ದಿ. ಪ್ರಭುಲಿಂಗಯ್ಯ ಮಲ್ಲಾಪೂರರಲ್ಲಿದ್ದ ಕನ್ನಡ ನಾಡು, ನುಡಿ, ಸಾಹಿತ್ಯಗಳ ಬಗೆಗಿನ ತಲಸ್ಪರ್ಶಿಯಾದ ಜ್ಞಾನ, ಅಭಿಮಾನಗಳನ್ನು ಓದುಗರು ಗಮನಿಸಬಹುದಾಗಿದೆ.

—ಶಿವಶರಣ ಜಾವಳಿ

ತ್ವರಿತ ಮುದ್ರಣ—ಗದಗ

# ವಾಙ್ಮಯ ಪ್ರವಾಹ

ಲೇಖಕರು :
**ಪ್ರೊ. ಪ್ರಭುಲಿಂಗಯ್ಯ ಮಲ್ಲಾಪೂರ**

ಪ್ರಕಾಶಕರು :
ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ
[ಗುಲಬರ್ಗಾ ಜಿಲ್ಲೆ]

( ಮಾಲಿಕೆ–೫ )

# ವಾಙ್ಮಯ ಪ್ರವಾಹ

ಲೇಖಕರು :

ಪ್ರೊ. ಪ್ರಭುಲಿಂಗಯ್ಯ ಮಲ್ಲಾಪೂರ

ಪ್ರಕಾಶಕರು :

ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ–585 222

( ಗುಲಬರ್ಗಾ ಜಿಲ್ಲೆ )

VANGMAYA PRAVAHA : A Collection of essays written by Shri Prabhulingayya Mallapur; Published by Nrupatunga Adhyayana Samsthe, Sedam–585 222
Pages: 112 + vi Price Rs : 10–00
First Edition : 1988

© ಶ್ರೀಮತಿ ಪ್ರಭುಲಿಂಗಯ್ಯ ಮಲ್ಲಾಪೂರ

ಪ್ರತಿಗಳು : 1000

ಬೆಲೆ : 10–00

ಪ್ರಕಾಶಕರು :
ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ 585 222 (ಜಿಲ್ಲೆ–ಗುಲಬರ್ಗಾ)

ಪ್ರಧಾನ ಸಂಪಾದಕರು :
ಡಾ. ಶೈಲಜಾ ಉಡಚಣ

ಸಂಪಾದಕರು :
ಪ್ರೊ. ಶಿವಶರಣ ಜಾವಳಿ
ಬಿ. ಮಹಾದೇವಪ್ಪ
ಪ್ರಭುರಾಜ ಅರಣಕಲ್

ಅಧಿಕೃತ ಮಾರಾಟಗಾರರು :
ನೀಲಕಂಠ ಬುಕ್ ಡಿಪೊ
ಸೇಡಂ : 585 222

ಮುದ್ರಣ :
ಫ. ಶಿ. ಭಾಂಡಗೆ, ತ್ವರಿತ ಮುದ್ರಣ
ಗಂಗಾಪೂರಪೇಟ, ಗದಗ–582 101

# ಪ್ರಕಾಶಕರ ಮಾತು

ಮತ್ತು
ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ, ಕಲಾತ್ಮಕ, ಸಾಹಿತ್ಯಿಕ ಅಧ್ಯಯನ
ಸಂಶೋಧಕ ಚಟುವಟಿಕೆಗಳಿಗೆ ಮೀಸಲಾದ ನಮ್ಮ ನೃಪತುಂಗ ಕಡಲ
ಸಂಸ್ಥೆಯು ದಿ. 28–11–82 ರಂದು ಜ್ಞಾನಪೀಠ ಪ್ರಶಸ್ತಿ ವಿಜೇತ, ಉದ್ಘಾಟಿಸಲ್ಪಟ್ಟು,
ತೀರದ ಭಾರ್ಗವ ಡಾ. ಕೆ. ಶಿವರಾಮ ಕಾರಂತ ಅವರಿಂದ ಪ್ರಾರಂಭ
ನಾಲ್ಕು ವರ್ಷಗಳು ಮುಗಿದಿವೆ. ಐದನೆಯ ವರ್ಷ ಮುಗಿಯಲಿದೆ. ಯಶಸ್ವಿ
ದಿಂದಲೂ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ
ಯಾಗಿ ನಡೆಸಿಕೊಂಡು ಬಂದ ಈ ವಿಭಾಗದ ಹೆಮ್ಮೆಯ ಕೇಂದ್ರವಾದ ದಾಖಲೆಗಳತ್ತ
ಸಂಸ್ಥೆಯು ತನ್ನ ಕ್ರಿಯೆಯನ್ನು ತೀವ್ರಗೊಳಿಸಿಕೊಂಡು ಶಾಶ್ವತ ಹಾಕಿ
ಮುನ್ನಡೆಯುವ ಹಂಬಲದಿಂದ ಪ್ರಕಾಶನ ವಿಭಾಗವೊಂದನ್ನು ಹುಟ್ಟು ಹೊರ
ಒಂದು ಸಾವಿರ ಪುಟಗಳ ವಿವಿಧ ಪ್ರಕಾರಗಳ ಸಾಹಿತ್ಯಿಕ ಕೃತಿಗಳನ್ನು ಪ್ರೋತ್ಸಾ
ತರುವುದರೊಂದಿಗೆ ನಮ್ಮ ವಿಭಾಗದ ಹಿರಿ–ಕಿರಿಯ ಸಾಹಿತಿಗಳಿಗೆ
ಹಿಸುವ ಸದುದ್ದೇಶದಿಂದ ಪ್ರಕಟನೆಯ ಕೆಲಸ ಪ್ರಾರಂಭಿಸಿತು.

ಹಲವಾರು ಎಡರು–ತೊಡರುಗಳ ಮಧ್ಯೆ–ಗುಲಬರ್ಗಾ, ಬೀದರ್, ಪ್ರಕಾರಗಳ
ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಿಂದ, ಸಾಹಿತ್ಯದ ವಿವಿಧ ವರ್ಷ ಕಳೆ
ಲೇಖಕರನ್ನು ಆಯ್ಕೆ ಮಾಡಿ ಹಸ್ತಪ್ರತಿ ತರಿಸಿಕೊಳ್ಳುವಲ್ಲಿ ಒಂದು ತ್ವರಿತ
ಯಿತು. ಸುಂದರ ಮುದ್ರಣದ ಆಕಾಂಕ್ಷೆಯಿಂದ ದೂರದ ಗದುಗಿನ 1987 ರ
ಮುದ್ರಣಾಲಯದಲ್ಲಿ ಹಸ್ತಪ್ರತಿಗಳನ್ನು ಕೊಟ್ಟುಬಂದದ್ದಾಯಿತು. ಕನಿಷ್ಠ
ನವೆಂಬರ್‌ನಲ್ಲಿಯೇ (ನೃ. ಅ. ಸಂಸ್ಥೆಯ ವಾರ್ಷಿಕೋತ್ಸವದಂದು) ಹಲ
ಐದು ಹೊತ್ತಿಗೆಗಳನ್ನಾದರೂ ಹೊರತರಬೇಕೆಂಬ ನಮ್ಮ ಮಹದಾಸೆಗೆ ಮುದ್ರಣಾಲಯಕ್ಕೆ
ವಾರು ತೊಂದರೆಗಳು ಎದುರಾದವು. ನಿಗದಿತ ಅವಧಿಯಲ್ಲಿ ಹಸ್ತ
ಕೊಡಬೇಕಿದ್ದ ಹಣ ಚಂದಾದಾರರಿಂದ ಸಂಗ್ರಹವಾಗಲಿಲ್ಲ. ಈ ಮಧ್ಯೆ ತಮ್ಮ
ಪ್ರತಿ ಕೊಟ್ಟ ಲೇಖಕರು ಮುದ್ರಣಕಾರ್ಯ ವಿಲಂಬವಾಗುತ್ತಿರುವದಕ್ಕೆ ಸಹಜವೆನಿಸುವ
ಪ್ರತಿಗಳನ್ನು ಹಿಂದಿರುಗಿಸಲು ಪತ್ರವ್ಯವಹಾರ ನಡೆಸಿದರು. ಸ್ಥಿತಿಯನ್ನು
ಲೇಖಕರ ಈ ತೆರನಾದ ಪ್ರಕ್ರಿಯೆಗೆ ನಮ್ಮ ಸಂಸ್ಥೆಯ ಆರ್ಥಿಕ ಕೃತಜ್ಞತೆ
ಮನವರಿಕೆ ಮಾಡಿಕೊಟ್ಟು, ಅವರ ತುಂಬು ಹೃದಯದ ತಾಳ್ಮೆಯನ್ನು

ಯಿಂದ ಸ್ಮರಿಸುತ್ತ ಮುದ್ರಣ ಕಾರ್ಯ ಮುಗಿಸಿ ಮೊದಲ ಕಂತಿನ ಐದು ಹೊತ್ತಿಗೆಗಳನ್ನು ಈಗ ಪ್ರಕಾಶಿಸುತ್ತಿದ್ದೇವೆ.

ಈ ಹೊತ್ತಿಗೆಗಳು ಹೊರಬರುವಲ್ಲಿ ಕಾರಣೀಭೂತರಾದ ಸಹೃದಯ ಲೇಖಕರಿಗೂ, ಚಂದಾದಾರರಿಗೂ ಹಾಗೂ ಸುಂದರವಾಗಿ ಹೊತ್ತಿಗೆಗಳನ್ನು ಮುದ್ರಿಸಿಕೊಟ್ಟ ಶ್ರೀ ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣದ ಸಂಚಾಲಕರಾದ ಶ್ರೀ ಅಶೋಕ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಒಂದು ಸಾವಿರ ಪುಟಗಳ ಸಾಹಿತ್ಯ ನಿರ್ಮಿಸುವ ಪ್ರಸ್ತುತ ಯೋಜನೆ ಫಲಪ್ರದವಾಗಬೇಕಾದರೆ ಸಂಸ್ಥೆಯ ಅಭಿಮಾನಿಗಳೆಲ್ಲ ಮೊದಲ ಕಂತಿನ ಐದು ಹೊತ್ತಿಗೆಗಳನ್ನು ಕೊಂಡು, ಓದಿ, ಮುಂದಿನ ಪ್ರಕಟಣೆಗಳಿಗೆ ತಮ್ಮ ಅಮೂಲ್ಯ ಸಲಹೆಗಳೊಂದಿಗೆ ಚಂದಾಹಣ ಕೊಟ್ಟು ಪ್ರೋತ್ಸಾಹಿಸಲು ವಿನಂತಿಸುತ್ತೇವೆ.

ಈ ಮೊದಲ ಕಂತಿನ ಹೊತ್ತಿಗೆಗಳು ಹೊರಬರುವಲ್ಲಿ ತಮ್ಮ ಅಮೂಲ್ಯ ಸಲಹೆ-ಸಹಕಾರಗಳನ್ನಿತ್ತ ನೃಪತುಂಗ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ಶಾಂತವೀರ, ಬಿ. ಸುಂಕದ ಅವರಿಗೂ, ಸಂಚಾಲಕರಾದ ಶ್ರೀ ಬಸವರಾಜ ಪಾಟೀಲರಿಗೂ ನಮ್ಮ ಅಭಿವಂದನೆಗಳು.

ನವೆಂಬರ್ 8, 1988

—ಪ್ರಭುರಾಜ ಅರಣಕಲ್
ಸಂಪಾದಕ ಮಂಡಲಿಯ ಪರವಾಗಿ

# ಪರಿವಿಡಿ


| ಅಧ್ಯಾಯ | | ಪುಟಸಂಖ್ಯೆ |
|---|---|---|
| ೧. | ಕಲೆ ಮತ್ತು ಅನುಕರಣೆ | ೧ |
| ೨. | ಕವಿ 'ಕಾವ್ಯಾನಂದ'ರು | ೧೪ |
| ೩. | 'ಅನುಭಾವಿ-ಕವಿ ಮಧುರಚೆನ್ನರು' | ೨೨ |
| ೪. | ಕಾರಂತರ ಪ್ರವಾಸ ಸಾಹಿತ್ಯ | ೩೬ |
| ೫. | "ಕುವೆಂಪು" ಅವರ ಮಕ್ಕಳ ಸಾಹಿತ್ಯ | ೫೧ |
| ೬. | ಸರ್ವಜ್ಞನ ಜೀವನ ಪರಿಚಯ | ೬೦ |
| ೭. | 'ಕವಿರಾಜಮಾರ್ಗ'ದಲ್ಲಿ ಕನ್ನಡಿಗರ ಬಾಳಿನ ಮಾರ್ಗ | ೬೯ |
| ೮. | ಅಕ್ಕನ ಅಧ್ಯಾತ್ಮ ಸೌಂದರ್ಯ | ೭೮ |
| ೯. | ಬಸವಣ್ಣನವರ ಸಾಹಿತ್ಯ ಕ್ರಾಂತಿ | ೯೦ |
| ೧೦. | ಬಹುರೂಪಿ ಚೌಡಯ್ಯ | ೧೦೨ |
| ೧೧. | ಹರಿಹರನ ರಗಳೆಗಳು | ೧೦೮ |

# ಕವಿ 'ಕಾವ್ಯಾನಂದ'ರು

೧೯ನೆಯ ಶತಮಾನದ ಮಧ್ಯಭಾಗ. ಕರ್ನಾಟಕವಿರಲಿ, ಇನ್ನೂ ಭರತ ಖಂಡವೇ ಮಲಗಿದ್ದ ಕಾಲ. ಆದರೆ ಅಷ್ಟರಲ್ಲಿಯೆ ನವ ಪ್ರಜ್ಞೆಯಿಂದ ಜಾಗೃತಗೊಂಡು ದೇಶ ಏಳುವ ಸಿದ್ಧತೆ ನಡೆಸಿತ್ತು. ಹರಿದು ಹಂಚಿ ಹೋಗಿದ್ದ ಕನ್ನಡ ನಾಡಿನವರ ಹೃದಯದಲ್ಲಿಯೂ ಹೊಸಗನ್ನಡ ಯುಗ, ರಾಷ್ಟ್ರ ನವೋದಯದೊಡನೆ ಚೊಚ್ಚಿಲು ಹೆಜ್ಜೆಗಳನ್ನು ಮೂಡಿಸತೊಡಗಿತ್ತು. ಈ ಹೆಜ್ಜೆಗಳಲ್ಲಿ ಇಂಗ್ಲೀಷ ಸಾಹಿತ್ಯದ ಪ್ರಭಾವ, ಪ್ರಚೋದನೆಗಳ ಗುರುತೂ ನಿಚ್ಚಳವಾಗಿತ್ತು. ಹೊರಗಿನ ಪ್ರಭಾವ, ಪ್ರಚೋದನೆಗಳೊಡನೆ ನಮ್ಮವರ ಪರಂಪರೆಯ ಪ್ರಜ್ಞೆ, ಭಾರತೀಯತ್ವದ ಚಿಂತನೆಯ ಜ್ವಲಂತ ದರ್ಶನ ಕೂಡಿ ಬಂದು ಸ್ವಯಂ ಪ್ರತಿಭೆಯ ಪ್ರಭೆಯಲ್ಲಿ ಹೊಸಗನ್ನಡ ಭಾವಗೀತೆಯ ಸುಪ್ರಭಾತ ತಲೆದೋರಿತು. ಈ ಸುಪ್ರಭಾತದ ಹೊಂಬೆಳಕು ಪಸರಿಸಿದುದು ಪ್ರಮುಖವಾಗಿ ಮೈಸೂರು, ಧಾರವಾಡಗಳ ನಡುವೆ ಮೈಚಾಚಿ ನಿಂತ ಕನ್ನಡ ಕುಲ ರಸಿಕ ಬಾಂಧವರ ಹೃದಯ ಸರೋಜಗಳ ಮೇಲೆ ಮಾತ್ರ. ನವೋದಯದ ದಿನಮಣಿಯ ಕಿರಣಕಾಂತಿ ನೇರವಾಗಿ ಅಲ್ಲ, ಪರಾವರ್ತನಗೊಂಡಾದರೂ ಹೈದರಾಬಾದ ಕರ್ನಾಟಕದ ಭಾಗಕ್ಕೆ ಬರುವುದು ಕಷ್ಟವಾಗಿತ್ತು. ಉರ್ದುವಿನ ಪ್ರಭಾವ, ಪ್ರಸಾರ ಕಟುವಾಗಿ ದಟ್ಟವಾಗಿ ತುಂಬಿದ್ದ ಕಾಲವದು. ಇಂಥ ನಿಟ್ಟುಸಿರಿನ ಸ್ಥಿತಿಯಲ್ಲಿಯೂ, ಹೂತು ಹೋಗಿದ್ದ ನಿಧಾನವನ್ನು ಸ್ವಂತ ಪರಿಶ್ರಮದಿಂದ ಹುಡುಕಿ ಹೊರದೆಗೆದು ನೋಡಿ ಆನಂದಿಸುವ ಸಾಹಸಿಯ ಕಥೆಯಂತೆ, ರಾಯಚೂರು ಜಿಲ್ಲೆ, ಕನ್ನಡದ ಸತ್ವವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿತ್ತು. ಈ ಸಾಧನೆಯ ಬಲದಿಂದಲೇ ನಾಡಿನ ಇತರ ಭಾಗದಲ್ಲಿ ನಡೆದಿದ್ದ ಹೊಸಗನ್ನಡ ಕಾವ್ಯದ ಮೆರವಣಿಗೆಯಲ್ಲಿ ತನ್ನ ಮಂಜುಳ ರವದ ಕಿರುದೆರೆಗಳನ್ನೂ ತೂರಿ ಬಿಡಹತ್ತಿತ್ತು. ಕೆಲವೇ ದಿನಗಳಲ್ಲಿ ನಿಜಾಮರ ಈ ನಾಡಿನತ್ತ ಕನ್ನಡದ ಜನ ಕಿವಿದೆರೆದು, ಮನದೆರೆದು, ಮೈಮರೆದು ನಿಂತ ಕಾವ್ಯವನ್ನಾಲಿಸುವ ಗಾರುಡಿಗತನವನ್ನು ಎಸಗಿದವರು ಕವಿ ಕಾವ್ಯಾನಂದರು.

ದ್ಯಾಂಪುರ, ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ಒಂದು ಚಿಕ್ಕ ಹಳ್ಳಿ. ಆದರೆ ಅದರ ಕೀರ್ತಿ ಮಾತ್ರ ಅಲ್ಲಿಯ ಪುರಾಣಿಕರ ಪ್ರವಚನ ಪ್ರಖ್ಯಾತಿಯಿಂದಾಗಿ ಆಗಲೇ ಕನ್ನಡಿನ ನಡು ಭಾಗದ ಉದ್ದಕ್ಕೂ ವ್ಯಾಪಿಸಿತ್ತು.



ಈ ಹಳ್ಳಿಯೇ 'ಕಾವ್ಯಾನಂದ' ಶ್ರೀ ಸಿದ್ಧಯ್ಯನವರ ಜನ್ಮಸ್ಥಳ. ಅಜ್ಜ ಕವಿರತ್ನ ಚನ್ನ ಕವಿಗಳು ಅಗಾಧ ಪಂಡಿತರು. ಸರಸ ಪುರಾಣ ಕವಿಗಳು, ತಂದೆ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು ಸರಸ ಕವಿಗಳು, ನಿರರ್ಗಳ ವಾಕ್‌ಪಟುತ್ವವುಳ್ಳ ಪ್ರವಚನಕಾರರು, ಶಿವಭಕ್ತಿ ಸಂಪನ್ನರು, ಪುರಾಣ ಕರ್ತೃಗಳು. ಈ ಉಜ್ವಲ ಪರಂಪರೆಯ ರಸಬಳ್ಳಿಯಲ್ಲಿ ಸಿದ್ಧಿ ಕುಸುಮ ಮೂಡಿ ಬಂದಂತೆ ಸಿದ್ಧಯ್ಯನವರು ಹುಟ್ಟಿ ಬಂದರು ಕ್ರಿ. ಶ. ೧೯೧೮ರ ಆಗಷ್ಟ ೧೮ ರಂದು.

ಪ್ರಾಥಮಿಕ ಶಿಕ್ಷಣಕ್ಕೆ ಶಾಲೆ ಎಷ್ಟೋ ಅಷ್ಟೆ! ಮನೆಯ ವಾತಾವರಣದ ಕಾವಿನಲ್ಲಿಯೇ ಕಾವ್ಯಾನಂದರ ಹೃದಯ ಬುದ್ಧಿಗಳು ಹದಗೊಳ್ಳುತ್ತಿದ್ದವು, ಹದನಗೊಳ್ಳುತ್ತಿದ್ದವು. ನೆರೆಯ ಊರಾದ ಕುಕನೂರಿನಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಯಿತು. ವಿದ್ಯಾದಾಹ ಇವರನ್ನು ಕಲಬುರ್ಗಿಗೆ ಕರೆತಂದಿತು. ಸರಕಾರಿ ಹೈಸ್ಕೂಲಿನಲ್ಲಿ ಓದಿನ ಮುನ್ನಡೆ. ತರಗತಿಯಲ್ಲಿ ಇವರು ತೋರುತ್ತಿದ್ದ ಬುದ್ಧಿಮತ್ತೆ, ಪ್ರತಿಭೆ. ಗಂಭೀರತೆಗಳು ಗುರುಗಳ ಹರುಷವನ್ನು ಉಕ್ಕಿಸಿ ಅನೇಕ ಸಲ ಅವರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು. ತಾದಾತ್ಮ್ಯದ ಸತತಾಭ್ಯಾಸ, ನಿರಂತರ ಸ್ಫೂರ್ತಿಭಾವ, ಸಾಹಿತ್ಯದ ಅತ್ಯಾಸಕ್ತಿ ಇವು ವಿಕಸನಗೊಳ್ಳುತ್ತಲಿದ್ದ ಬಾಲಕನ ಅಂತಃಶಕ್ತಿಗೆ ಚೈತನ್ಯದಾಯಿಯಾದವು. ಇಂಟರ್ ಮಿಡಿಯಟ್ ಓದು ಮುಗಿಯುವ ಹೊತ್ತಿಗೆ ಶ್ರೀ ಸಿದ್ಧಯ್ಯನವರು ಹೈದ್ರಾಬಾದ ಕರ್ನಾಟಕದ ಆಶಾಜ್ಯೋತಿಯಾಗಿ ಬೆಲೆ ತರುವ ಕವಿಯಾಗಿ ಮಿನುಗತೊಡಗಿದರು. ಸೂಟಿಯ ದಿನಗಳಲ್ಲಿ ವಿರಾಮಕ್ಕೆಂದು ಮನೆಗೆ ಹೋದರೆ ಕಾವ್ಯಾರಾಮದಲ್ಲಿ ಹೃದಯವನ್ನು ಹರಿಯ ಬಿಟ್ಟು ಓಲಾಡುವ ಅವಿರಾಮ ಸ್ಥಿತಿ. "ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೆ ಅವರು ಶರಣ ಸಾಹಿತ್ಯವನ್ನು ಮುಕ್ಕಿದರು, ದೇಶ ಸೇವಾ ತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು*" ಈ ರಸಾನುಭೂತಿಯ ಹಿನ್ನೆಲೆಯಲ್ಲಿ ಸಿದ್ಧಯ್ಯನವರ ಪ್ರತಿಭೆ ನಿಗಿನಿಗಿಸಿ ಅವರು 'ಕಾವ್ಯಾನಂದ'ರಾಗಿ ನಿಲ್ಲಲು ಬಹು ಕಾಲ ಬೇಕಾಗಲಿಲ್ಲ.

ಹೈದ್ರಾಬಾದಿನಲ್ಲಿ ಬಿ. ಎ. ಓದು; ಹರೆಯದ ಹೊಸ್ತಿಲನ್ನು ತುಳಿಯುತ್ತಲಿದ್ದ ಯುವಕನ ಹೃನ್ಮನಗಳಲ್ಲಿ ಕವಿತ್ವ ಆವಿರ್ಭಾವಗೊಳ್ಳಲು ತವಕಿಸುತ್ತಿತ್ತು. ಈ ಭಾವಾಂದೋಲನದಲ್ಲಿ ಮಿಸುಕುತ್ತಿದ್ದ ಹೊಸ ಕೃತಿಯ ರೂಹು! ಆದೇ

* ಶ್ರೀ ದ. ರಾ. ಬೇಂದ್ರೆ–"ಜಲಪಾತ"ದ ಮುನ್ನುಡಿಯಲ್ಲಿ

'ಆತ್ಮಾರ್ಪಣೆ' ಎಂಬ ನಾಟಕವಾಗಿ ರೂಪ ತಾಳಿತು. ಬಸವಣ್ಣನವರ
ಜೀವನದ ಸಾಧನೆ, ಸಿದ್ಧಿಗಳನ್ನು ಅಂತಃಕರಣಕ್ಕೆ ಮುಟ್ಟಿಸಬಲ್ಲ ಹರಿತ ಲೇಖ
ನಿಯ ಹಿರಿಯ ನಾಟಕವದು. ಈ ಕೃತಿಯ ಒಡಲಲ್ಲಿಯೆ ಅದಮನೀಯ
ಬಯಕೆಯಿಂದ ಗರಿಗೆದರಿ ಹಾರಲು ನಿಂತಿರುವ ಕಾವ್ಯ ಪಕ್ಷಿಯ ರೂಪ ದರ್ಶನ
ನಮಗಾಗುತ್ತದೆ. ಕನ್ನಡ, ಉರ್ದು, ಸಂಸ್ಕೃತ, ಇಂಗ್ಲೀಷ ಭಾಷೆ, ಸಾಹಿತ್ಯ
ಗಳ ಆಳವಾದ ಅಭ್ಯಾಸ, ಅಲ್ಲಿಯ ಕಾವ್ಯ ರಸದಲ್ಲಿ ಮುಳುಗಿ ತನ್ಮಯರಾಗು
ವಷ್ಟು ನಿರ್ಭರ ಅಲ್ಲಿಯ ರಸಾನಂದವನ್ನು ಹೀರಿ ಫೂತ್ಕರಿಸುವ ಹುರುಪು,
ಹುಮ್ಮಸ ಅವಿರತವಾಗಿ ಬೆಳೆಯುತ್ತ ಹೋಯಿತು ಕಾವ್ಯಾನಂದರಲ್ಲಿ. ಬಿ.ಎ.
ಮುಗಿಯಿತು. ಕಾಯಿದೆಯ ಓದನ್ನು ಪೂರೈಸಿದರು. ಜೀವನ ಪಥದಲ್ಲಿ
ಏನಾಗಿ ಹೆಜ್ಜೆಯಿಡಬೇಕು! ವಿಚಾರಗಳ ತಾಕಲಾಟದಲ್ಲಿ ಸರಕಾರದ ಅಧಿಕಾ
ರಿಯ ಹುದ್ದೆ ಕೈ ಮಾಡಿ ಕರೆಯಿತು. ಸರಕಾರಿ ಸೇವಾ ಕ್ಷೇತ್ರಕ್ಕೆ ಪದಾರ್ಪಣೆ
ಆಯಿತು. ಆದರೇನು ಈ ಅಧಿಕಾರಿಯ ಅಂತರಾಳದಲ್ಲಿ ಸತ್ಯರಾಧಕ
ನಾಗಿ, ಶಿವಾರಾಧಕನಾಗಿ, ಸೌಂದರ್ಯಾರಾಧಕನಾಗಿ ಈಗಾಗಲೇ ಬಹು ದೂರ
ಸಾಗಿ ಬಂದಿದ್ದ 'ಕಾವ್ಯಾನಂದ'ನನ್ನು ಕಾವ್ಯ ಪಥದಿಂದ ವಿಮುಖಗೊಳಿಸಲು
ಯಾವ ಶಕ್ತಿಗೂ ಸಾಧ್ಯವಾಗಲಿಲ್ಲ. ಆಡಳಿತ ನಡೆಸುತ್ತ ಆಯ್. ಎ. ಎಸ್.
ಹಿರಿಯ ಅಧಿಕಾರಿಯಾದಂತೆ, ಆಡಳಿತದ ಕಲ್ಲು ನೆಲವನ್ನು ತುಳಿಯುತ್ತ ಸೇವಾ
ನಿರ್ಬಂಧದ ಬಂಧನಗಳನ್ನು ಬಿಗಿದುಕೊಂಡು, ಕೈಗೆ ಸಿಲುಕದೆ ನುಸುಳಿ
ಹೋಗುತ್ತಿರುವ ವೇಳೆಯನ್ನು ಹಿಡಿದೆಳೆದು ಹೊಂದಿಸಿಕೊಂಡು ಇವರ ಸೃಜನ
ಶೀಲ ಪ್ರವೃತ್ತಿ ಸತ್ವಪೂರ್ಣ ಕೃತಿ ರತ್ನಗಳನ್ನೂ ಕೊಡುತ್ತ ಸವ್ಯಸಾಚಿಯಾಗಿ
ನಿಂತಿದೆ.

'ಜಲಪಾತ' ಕಾವ್ಯಾನಂದರ ಪ್ರಥಮ ಸಂಕಲನ. ಇಷ್ಟೇ ಅಲ್ಲ, ಹೈದ
ರಾಬಾದ ಕರ್ನಾಟಕವು ಹೊಸಗನ್ನಡ ಕಾವ್ಯಲೋಕಕ್ಕೆ ನೀಡಿದ ಪ್ರಥಮ
ಪುಷ್ಪ! ಇದರ ಬಹುಪಾಲು ಕವನಗಳೆಲ್ಲ ಮೊದಲೇ ನಾಡಿನಲ್ಲಿ ನಿನದಿಸಿದ್ದವು.
ಸಂಕಲನಗೊಂಡು "ಜಲಪಾತ"ವಾದುದು ೧೯೫೩ ರಲ್ಲಿ. ಜೀವನಾನುಭವ,
ಕವಿಯ ಭಾವಶೈಲದಿಂದ ಧುಮ್ಮಿಕ್ಕುವ ಅಬ್ಬರದ ವಾಣಿಯನ್ನು ನಾವಿಲ್ಲಿ ಕಾಣ
ಬಹುದು. ಸಮಕಾಲೀನ ಜನಜೀವನ, ರಾಷ್ಟ್ರ ಜೀವನಗಳ ಇರವನ್ನು
ಒಪ್ಪುವ ಅಥವಾ ಪ್ರತಿಭಟಿಸುವ ನಚ್ಚು-ಕೆಚ್ಚು ಯುವಕವಿಗಳಲ್ಲಿ ಪ್ರತಿಧ್ವನಿಸಿ
ದರೆ ಅದು ಸಹಜ, ಸುಂದರ ಈ ಅಬ್ಬರದ ತಡಸಲಿಗೆ ನಿಂತು ಜಾನಿಸಲೂ
ವ್ಯವಧಾನವಿಲ್ಲ, ಶಾಂತಿಯಿಲ್ಲ. "ನಾನಿಹೆನೊ ಉಪಕಾರಿ ಇಲ್ಲವೆ ಅಪಕಾರಿ,
ನನಗೆ ಸಹ ಗೊತ್ತಿಲ್ಲ" ಎನ್ನುವ ಜಲಪಾತದ ಮೊಳಗಿನಲ್ಲಿ ನೆಲೆ-ಬೆಲೆಯನ್ನರಿ



ಯದ ಕೇವಲ ಭ್ರಮೆಯ ಗತಿ ಇದೆ ಎಂದು ನಾವು ಭಾವಿಸಬೇಕಾಗಿಲ್ಲ.
"ನಾಗೈದ ನಾಶದಲೆ ಮುಂದಿನ ವಿಕಾಸವಿದೆ; ಮಾಡಿ ನೋಡಿರಿ ನನ್ನ ಶಕ್ತಿ
ಫಲಕಾರಿ" ಎಂಬ ಅದರ ಈ ಆಹ್ವಾನದಲ್ಲಿ ಫಲಕಾರಿಯಾಗಬಲ್ಲ ಶಕ್ತಿಯ
ಆತ್ಮ ವಿಶ್ವಾಸದ ಮೊಳಗಿದೆ. ಆ ಶಕ್ತಿಯಲ್ಲಿ ಸೊಗವಿದೆ, ಶಾಂತಿಯಿದೆ,
ಹೃದಯಾನಂದವಿದೆ ಎನ್ನುವುದೂ ಅಷ್ಟೇ ಸತ್ಯ. ಅವರ ಮುಂದಿನ ಸಾಹಿತ್ಯ
ಸೃಷ್ಟಿಯಲ್ಲಿ ಮಾನವತೆಯ ಮಮತೆ, ಸರ್ವ ಸಮತೆ, ಭಾವದೌನ್ನತ್ಯ,
ನಿಸರ್ಗದ ಪ್ರೇಮ, ಪ್ರತಿಭೆಯ ಮಿಂಚು, ಕಲ್ಪನೆಯ ಬೆಡಗು, ರಸಾನಂದದ
ಸ್ಥಿತಿ, ನಾಡು ನುಡಿಗಳ ಆಳವಾದ ಭಕ್ತಿ, ಅಧ್ಯಾತ್ಮ ದೀಪ್ತಿ ಇವು ಒಡನೊಡನೆ
ಬೆರೆದು ಬಂದು ಪರಿಪೂರ್ಣ ಜೀವನ ದರ್ಶನದ ಸಿದ್ಧಿ ಸಾಧ್ಯವಾಗಿರುವುದು
ವೇದ್ಯವಾಗುತ್ತದೆ.

ಕಾವ್ಯಾನಂದರ ಸಾಹಿತ್ಯ ಸೃಷ್ಟಿಯಲ್ಲಿ ಇಪ್ಪತ್ತಕ್ಕೂ ಮಿಕ್ಕಿದ ವೈವಿಧ್ಯ
ಮಯ ಗ್ರಂಥಗಳಿವೆ. ಅಲ್ಲಿ ನಾಟಕಗಳಿವೆ, ಕಥಾ ಸಂಕಲಗಳಿವೆ, ಭಾವ ಗೀತೆ
ಗಳಿವೆ, ಕಾದಂಬರಿ ಇದೆ, ಚರಿತಾಮೃತ ಗದ್ಯವಿದೆ, ವಚನ ರಚನೆ ಇದೆ, ಸಂಪಾ
ದನೆ ಇವೆ ಆದರೆ ಈ ವೈವಿಧ್ಯಮಯ ಸಾಹಿತ್ಯರಾಶಿಯಲ್ಲಿ ಮಿಡಿಯುತ್ತಿರು
ವುದು ಕಾವ್ಯದ ಲಾಲಿತ್ಯ, ಲಯ, ಭಾವದೈಸಿರಿಗಳ ಅಭಿವ್ಯಕ್ತಿ ಎಂದು ನನ್ನ
ನಂಬುಗೆ. ಕಾವ್ಯಗುಣದ ಈ ಸ್ಥಾಯಿ ತಾನೇ ಸಂಚಾರಿಯಾಗಿ ನಿಂತು ಹಲ
ವಂದದ ಸಾಹಿತ್ಯ ರೂಪಕ್ಕೆ ದಾರಿ ಮಾಡಿಕೊಟ್ಟಿದೆ. ಆತ್ಮಾರ್ಪಣೆ, ರಜತ
ರೇಖೆ, ಭಾರತವೀರ ಇವು ನಾಟಕಗಳು. ಜಲಪಾತ, ಕರುಣಾಶ್ರಾವಣ,
ವಿಕಾಸವಾಣಿ, ತುಪ್ಪಾ ರೊಟ್ಟಿ ಗೇಗೇಗೇ, ಮಾನಸ ಸರೋವರ, ಕಲ್ಲೋಲ
ಮಾಲೆ, ಮೊದಲು ಮಾನವನಾಗು ಇವು ಅವರ ಕವನ ಸಂಕಲನಗಳು. ಕಥಾ
ಮಂಜರಿ, ತುಷಾರ ಹಾರ ಕಥಾ ಸಂಗ್ರಹಗಳು. ತ್ರಿಭುವನ ಮಲ್ಲ ಕಾದಂಬರಿ,
ಶರಣ ಚರಿತಾಮೃತ ಶರಣರ ಚರಿತ್ರೆಗಳ ಮಂಗಲ ಮೇರು ಗದ್ಯಕೃತಿ.

ಕರುಣಾ ಶ್ರಾವಣದಲ್ಲಿ ಉನ್ನತ ಧ್ಯೇಯವಾದ, ತೀಕ್ಷ್ಣ ಸೌಂದರ್ಯ
ದೃಷ್ಟಿ ಲಲಿತ-ಪ್ರಸನ್ನ ಶೈಲಿ ಎದ್ದು ಕಾಣುವ ಅಂಶಗಳು, ಕಾಶ್ಮೀರದಲ್ಲಿ
ಕಾರ್ಗಾಲ, ಆರಿಲ್ಲ ಈವರೆಗೆ ಆಶಾಪ್ರದೀಪ, ಕರುಣಾ ಶ್ರಾವಣ ಈ ಗೀತೆಗಳು
ಅವರ ಕಾವ್ಯ ಗುಣಗಳನ್ನು ಬಿಡಿಸಿ ತೋರಿಸುವ ಸಮರ್ಥ ಮಾದರಿಗಳು
ಎನ್ನಬಹುದು.

ಸೆಣಸಿ ಸೋತಿತು ಕೊನೆಗೆ ಕಾಲ-ಪ್ರಕೋಪ
ಆರಿಲ್ಲ ಈವರೆಗೆ ಆಶಾಪ್ರದೀಪ

ಕಾಲ ಪ್ರಕೋಪ ಆಶಾರಾಜ ಹಂಸನ ಮೇಲೆ ಕರ್ಕಶವಾಗಿ ಎರಗುತ್ತಲೇ ಬಂದಿದೆ. ಆದರೆ ಆಶಾ ಪ್ರದೀಪ, ಕಾವ್ಯ ಪ್ರದೀಪ, ಪ್ರೇಮ ಪ್ರದೀಪ, ಜೀವ ಪ್ರದೀಪ, ಧರ್ಮ ಪ್ರದೀಪ, ಜ್ಞಾನ ಪ್ರದೀಪ ಈ ವರೆಗೆ ಆರಿಲ್ಲ, ಕಾಲ ಪ್ರಕೋಪ ಮಾನವರನ್ನು ಕೊಂದೀತು. ಆದರೆ ಮಾನವತೆಯ ಮಾರ್ದವ ಶಕ್ತಿಯನ್ನು ಕೊಲ್ಲುವ ಅಸ್ತ್ರ ಯಾರ ಬತ್ತಳಿಕೆಯಲ್ಲಿಯೂ ಇಲ್ಲ. ಜೀವಿಸುವ ಜೀವಶಕ್ತಿಯ ಕೆಚ್ಚಿನ ಸುಂದರ ಚಿತ್ರಣವಿದು. ಇದು ಜಾಗತಿಕ ಕವಿ ದರ್ಶನ. ಕಾವ್ಯಾನಂದರ ನಿಸರ್ಗ ಕವನಗಳಲ್ಲಿ ರುಂದ್ರ-ರಮಣೀಯತೆ, ರಸಸ್ನಾನ, ಶಿವ ದರ್ಶನಗಳ ಮುಪ್ಪುರಿಯಿದೆ; ಇಂದ್ರಿಯಾನುಭವವನ್ನು ಅತೀಂದ್ರಿಯದ ರಸ ಸ್ಥಾನಕ್ಕೇರಿಸಿ ಅಮೂರ್ತವನ್ನು ಮೂರ್ತಗೊಳಿಸುವ ಕವಿಋಷಿಯ ಸಾಕ್ಷಾತ್ಕಾರದ ಚಿತ್ರಣವಿದೆ.

ಕಾರ್ಗಾಲ ಕಾಶ್ಮೀರಶ್ರೀಗೆ ಸೌಂದರ್ಯ ಸ್ನಾನವಾಗುವದು, ಹಿಮಾಲಯ ರುದ್ರ ಮೇಘವೆಂಬ ಗಜ ಚರ್ಮಧಾರಿ; ಸುರಿದ ಹಿಮ ಅವನ ಅಂಗಭಸಿತ. ಶ್ರೀನಗರವೇ ಗೌರಿ. ಶಿವ ಶಿವೆಯರ ಈ ಸಂಗ ಪೂಜೆಗೆ ಮಳೆಯೇ ಉದಕ, ಆಲಿಕಲ್ಲುಗಳೇ ಕುಸುಮ, ಮಿಂಚು ದೀಪ, 'ಮಳೆ' ಎಂಬ ಕವನದಲ್ಲಿಯೂ ಇದೇ ದರ್ಶನ ಶಕ್ತಿ ಸಾರವತ್ತಾಗಿ ಭವ್ಯವಾಗಿ ಅಡಕವಾಗಿದೆ. ವಿಶ್ವಲಿಂಗದ ಮೇಲೆ ಸುರಿಯುತಿಹ ಉದಕಧಾರೆ ನೀರಲ್ಲ, ತೀರ್ಥ; ವಿಶ್ವಲಿಂಗೋದಕ ಇದನ್ನು ಕುಡಿದು ಇನ್ನಾದರೂ ನರರ (ನರಕ) ಜೀವನ ನಾಕವಾಗಲಿ ಎಂದು ಆಶೆಗೈದಿದೆ ಕವಿಯ ಅಂತಃಕರಣ.

ಕಾವ್ಯಾನಂದರ ಕವನಗಳ ಮೈಸಿರಿ, ಹೃದಯಸಿರಿ ಇಂತಾದರೆ ಅವರ ಕಿರುಗತೆ, ಹನಿಗವನಗಳಲ್ಲಿ ವೇದ್ಯವಾಗುವ ಜೀವನಾನುಭವದ ಪರಿಪಕ್ವತೆಯ ತನಿವೆಳಗು ಇನ್ನೊಂದು ತೆರನಾಗಿ ಆಪ್ಯಾಯಮಾನ. ಬದುಕಿನ ಸಾರ ಅನುಭವದ ಆಳ–ನಿರಾಳದಲ್ಲಿ ಘನೀಭೂತಗೊಂಡು ನುಡಿಯಾಗಿ ಹೊರ ಹೊಮ್ಮಿದಂತೆ ಕಾಣುತ್ತದೆ, ತುಷಾರ ಹಾರ ಮತ್ತು ಕಲ್ಲೋಲ ಮಾಲೆಗಳಲ್ಲಿ. ಈ ಮನೋಭೂಮಿಕೆಯಲ್ಲಿ ಮುಂದುವರಿಯುವ ಕವಿಯ ಪರಿಪಕ್ವ ಜೀವನದೃಷ್ಟಿ, ಸಿಂಧುವನ್ನು ಬಿಂದುವಾಗಿಸಿಕೊಂಡು ವಚನ ಸೃಷ್ಟಿಗೆ ದಾರಿ ಮಾಡಿಕೊಡುತ್ತದೆ. ಇನ್ನು ಎನ್ನುವದನ್ನು ಪ್ರಜ್ಞಾವಂತ ಓದುಗ ಅರಿಯದಿರಲಾರ. ಈ ಮನದರಿಕೆ ಸತ್ಯವಾಗಿ ಕಾವ್ಯಾನಂದರು ಈಗ ನೂರಾರು ವಚನಗಳನ್ನು ಈಗಾಗಲೇ ರಚಿಸಿದ್ದಾರೆ; ರಚಿಸುತ್ತ ಸಾಗಿದ್ದಾರೆ, ಸ್ವತಂತ್ರಧೀರ ಸಿದ್ಧೇಶ್ವರಾ ಎಂಬ ಅಂಕಿತದಲ್ಲಿರುವ ಈ ವಚನಗಳು ಲೋಕಾನುಭವದ ರಸಘಟ್ಟಿಯಾಗಿವೆ; ಜೀವನ ಪಥದ ಬೆಳಕಾಗಿವೆ. ಈ ಕಾಲದ ಪ್ರಮುಖ ವಚನಕಾರರಲ್ಲಿ ಶ್ರೀ ಸಿದ್ಧಯ್ಯ



ನವರದು ಗಣ್ಯ ಸ್ಥಾನ.

ಕಾವ್ಯ ಬಿಂದುಗಳ ರಸದಾಗರವಾಗಿರುವ ಕಲ್ಲೋಲ ಮಾಲೆ, ತುಷಾರ ಹಾರದ ಕಥೆಗಳ ಸತ್ವವನ್ನೇ ತುಂಬಿಕೊಂಡಿರುವ ವಿಶಿಷ್ಟ ಕೃತಿ ಜೀವನದ ಅನುಭವ ಸವಿಯಾಗಿ, ಬೆಳಕಾಗಿ, ಬಿಂದುವಾಗಿ ತುಂಬಿ ನಿಂತಿದೆ ಇಲ್ಲಿ. "ಒಂದೊಂದು ಮಾತನ್ನು ಮೆಲುಕು ಹಾಕಿದಂತೆ ಆದರ ಉದಾತ್ತ ವಿಚಾರಗಳು ಹೊರ ಹೊಮ್ಮುತ್ತವೆ. ಹಲವು ಸಲ ಈ ಸಾಲುಗಳನ್ನು ನೆನೆಯುವುದೆಂದರೆ ಜೀವನದ ಕಷ್ಟಗಳನ್ನೇ ಮರೆತಂತೆ. ಈ ಸುಂದರ ಕಾವ್ಯಬಿಂದುಗಳು ಸದ್ಭಾವದ ಸುಗಂಧವನ್ನೂ, ಪ್ರೇಮ ಮಧುವನ್ನೂ ತುಂಬಿ ನಿಂತಿವೆ.* ತೆನೆಯ ಕಾಳಿನಂತೆ, ಹೂವಿನ ಎಸಳಿನಂತೆ ಬಿಡಿಯಾಗಿರುವ ತಮ್ಮ ಈ ಕವನಗಳು 'ಬಾಳ ಗುಬ್ಬಿಗೆ ಗುಟುಕಾಗಲಿ" ಎಂದು ಕವಿ ಹಾರೈಸಿದ್ದಾರೆ. ಬಾಳುಬೇಕೆಂಬ ಮಾನವನ ಬಾಳಿನಲ್ಲಿ ಬರುವ ನೋವುಗಳಿಗೆ ಇವು ಅಮೃತ ಸೇಚನ ಮಾಡಿಸುವವು.

ಆಗೊಂದು ಈಗೊಂದು ಹನಿಯನಿತ್ತರೆ ಸಾಕು
ಹನಿಸದಿರು ಮಧುರಸವ ನನ್ನ ಮೇಲೆ
ಅಹುದು,
ಅಭಾವವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಸಮೃದ್ಧಿಯನ್ನು ಸಹಿಸಿಕೊಳ್ಳುವುದೇ ಕಷ್ಟ;
ದುಃಖವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಸುಖವನ್ನು ಸಹಿಸಿಕೊಳ್ಳುವುದೇ ಕಷ್ಟ;
ಬಡತನವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಒಡೆತನವನ್ನು ಸಹಿಸಿಕೊಳ್ಳುವುದೇ ಕಷ್ಟ.

ಲೋಕ ಜೀವನ ಹೇಗೆ ಸಾಗಿ ಬಂದಿದೆ ಎಂಬುದರ ಕಟುಸತ್ಯ ಇಲ್ಲಿ ಮಡುಗಟ್ಟಿ ನಿಂತಿದೆ. ಜೀವನದ ಸ್ಥಿತಿ-ಗತಿಗಳ ಆಳದರ್ಶನ ಶಕ್ತಿ ಪ್ರತಿಭಾವಂತ ಕವಿಗೆ ಸಿದ್ಧಿಸುವ ಅಪೂರ್ವ ಗುಣ, ಕಲಾ ಜೀವಿಗಳು, ರಾಜರ್ಷಿಗಳು, ಶರಣ-ಸಂತರು, ಜ್ಞಾನಿ-ವಿಜ್ಞಾನಿಗಳು ಹಾಗೂ ಮಹಾ ಜನತೆ ಅಪಾರ ಅಭಾವ, ದುಃಖ, ಬಡತನಗಳ ಮಧ್ಯದಲ್ಲಿಯೂ ಶಾಂತಿಯಿಂದ ಜೀವಿಸಿ ಬಾಳನ್ನು ಬಂಗಾರವಾಗಿಸಿದ್ದರು ಎಂಬ ಚರಿತ್ರೆಯ ಸತ್ಯ ನಮ್ಮೆದುರಿಗಿದೆ; ಸಮೃದ್ಧಿ, ಸುಖ, ಒಡೆತನಗಳ ಆಧಿಕ್ಯ ಜನರನ್ನು ಮತ್ತೇರಿಸಿ ಮದಾಂಧರರನ್ನಾಗಿ ಮಾಡಿ ವಿಶ್ವಸಮರಗಳನ್ನು ಸ್ಫೋಟಿಸಿ ಲೋಕ ಜೀವನವನ್ನು ತಲ್ಲಣ

* 'ಕಲ್ಲೋಲ ಮಾಲೆ'–ಮುನ್ನುಡಿ, ಸದಾಶಿವ ಒಡೆಯರ

ಗೊಳಿಸಿದ ಕಥೆಯು ಇಲ್ಲಿದೆ. ಆದುದರಿಂದ ಸಮೃದ್ಧಿಯನ್ನು ಬೇಡಿ ಚಡಪಡಿಸಿ ಸಾಯುವುದಕ್ಕಿಂತ ಹನಿ ಹನಿಯನ್ನೆ ಸವಿಯುತ್ತ ಹಾಯಾಗಿರಲಿ ಮರ್ತ್ಯದ ಜೀವನ ಎನ್ನುತ್ತದೆ ಕವಿವಾಣಿ. ಈ ಜೀವನ ಸತ್ಯಕ್ಕೆ ಕಾವ್ಯಾನಂದರ ಕಲ್ಪನಾ ಶ್ರೀಯ ಸಂಸ್ಪರ್ಶವಾಗಿರುವುದರಿಂದಲೆ ಮಾತು ಶುಷ್ಕತತ್ವಜ್ಞಾನದ ಬರಿಯ ನೀತಿಯ ನುಡಿಯಾಗದೆ ಮಾತೆಂಬ ಜ್ಯೋತಿರ್ಲಿಂಗವಾಗಿದೆ; ಮಾನವ್ಯದ ಮಂದಾರವನ್ನರಳಿಸುವ ಮಂಗಲ ಕಿರಣವಾಗಿದೆ.

ರಜತರೇಖೆ, ಭಾರತ ವೀರ ಈ ಗೀತ ರೂಪಕ ಹಾಗೂ ನಾಟಕಗಳಲ್ಲಿ ವ್ಯಕ್ತವಾಗಿರುವುದು ಸ್ವಾರ್ಥಕ್ಕಿಂತ ಪರಾರ್ಥ ಮಿಗಿಲು, ಮಿಲನಕಿಂತ ವಿರಹ ಮಧುರ, ಮನ ಪರಿವರ್ತಿಸಿ ಯುಗ ಪರಿವರ್ತಿಸುವ ದಿವ್ಯ ವಿಧಾನ, ತಾಮಸ ದಿಂದ ಸಾತ್ವಿಕದತ್ತ ಸಾಗುವ ಜೀವನದ ಧ್ಯೇಯ. ಕ್ಷಮಾನ್ವಿತ ಕ್ಷಾತ್ರತೇಜ, ಮೊದಲಾದ ಜೀವನ ಮೌಲ್ಯಗಳ ಸುಂದರ ನಿರೂಪಣೆ. ಬಾನುಲಿ ರೂಪಕದ ತಂತ್ರ ಕೆಲವೆಡೆ ಕೆಟ್ಟಿರಲಿ, ಹಳೆ, ಹೊಸ, ಗ್ರಾಮ್ಯ, ಭಾಷೆಗಳ ಸಮ್ಮಿಶ್ರಣ ಕೆಲವೆಡೆ ಇಣಿಕಿರಲಿ, ಇವಾವುದರ ಕಡೆಗೂ ಸಹೃದಯನ ಗಮನ ಹರಿಯದೆ ಎಂಥ ಕಾರ್ಮೋಡಕೂ ಇಹುದೊಂದು ತಾತ್ವಿಕನೆ ಸುತ್ತು ಮನವನು ಸೆಳೆವ ರಜತ ರೇಖೆ ಎಂಬ ಜೀವನದ ಆಶಾಜ್ಯೋತಿಯ ಅಲ್ಲಿಯ ನಿತಾಂತ ಪ್ರಕಾಶ ಎದೆಯನ್ನು ತುಂಬಿ ನಿಲ್ಲುತ್ತದೆ.

'ಶರಣ ಚರಿತಾಮೃತ' ಕಾವ್ಯಾನಂದರ ಜೀವನ ಸಿದ್ಧಿ. ಸಾಹಿತ್ಯಸಿದ್ಧಿಗಳ ಮಹತ್ವದ ಮೈಲಿಗಲ್ಲು. ಅವರ ಶ್ರದ್ಧೆಯ ಒರೆಗಲ್ಲೂ ಅದಾಗಿದೆ. ಒಂಬತ್ತು ವರ್ಷಗಳ ಪರಿಶ್ರಮ ಶ್ರದ್ಧೆ. ಬುದ್ಧಿ ಭಾವಗಳೊಡನೆ ಸಂಗಮಿಸಿ ಸಾಕಾರ ಗೊಂಡಿದೆ ಶರಣ ಚರಿತಾಮೃತ. ಈ ಮೇರುಕೃತಿ ವಯಸ್ಕರ ಶಿಕ್ಷಣೋದ್ದೇಶ ದಿಂದ ರಚಿತವಾಗಿರುವ ಗ್ರಂಥವಾದರೂ ಸಮಸ್ತ ಜನರಿಗೆ ನಡೆ ನುಡಿ ಒಂದಾದ ಶರಣರ ಭಕ್ತಿ ಜೀವನದ ತಿರುಳನ್ನು ಹೃದಯಂಗಮವಾಗಿ ನೀಡುತ್ತದೆ. ಪುರಾತನ ಶರಣರಿಂದ ಮೊದಲುಗೊಂಡು ಅರ್ವಾಚೀನ ಕಾಲದ ಶರಣರ ಚರಿತ್ರೆಗಳು ಇಲ್ಲಿವೆ.

ಶರಣರು ಬಹಿರಂಗ, ಅಂತರಂಗ ಎರಡನ್ನೂ ಹಸನುಗೈದ ವಿಶಿಷ್ಟ ಬಗೆಯ ಮಹಾತ್ಮರಾದುದರಿಂದ ಅವರು ಲೋಕ ಜೀವನಕ್ಕೂ ನೇತಾರರು; ಆಧ್ಯಾತ್ಮ ಲೋಕಕ್ಕೂ ಮಾರ್ಗದರ್ಶಕರು. ಇಲ್ಲಿಯ ಶರಣರ ಶ್ರದ್ಧೆ ವೀರ ಶೈವವಾದರೂ ಅವರ ಜೀವನ ಶ್ರದ್ಧೆ ಕಾಯಕ ನಿಷ್ಠೆ, ಭಕ್ತಿ ಭಾವ, ಸತ್ಯ ನಿಷ್ಠೆ, ದಯಾಪರತೆ, ನಿರಹುಭಾವ, ಸರ್ವಾರ್ಪಣ ಗುಣ, ಆತ್ಮ ಪ್ರತ್ಯಯ, ಕಿಂಕರತ್ವ, ಶಿವತತ್ವ ಜಗದ ಉದ್ದಗಲಕ್ಕೂ ಹರಡಿರುವ ಮಾನವ ಕುಲದ ಬಾಳಿನ



ಸಾಫಲ್ಯಕ್ಕೆ ಪರಮ ಮೌಲ್ಯಗಳು; ವಿಶ್ವ ಧರ್ಮದ ಸಾರ ಸರ್ವಸ್ವ.

ಇಂಥ ತತ್ವಗಳನ್ನು ಅರಿದು ಆಚರಿಸಿ, ನುಡಿದು ಲೋಕವನ್ನು ಮುನ್ನ ಡೆಸಿ ಇಲ್ಲಿ ಸಲ್ಲುವವರಾಗಿ ಅಲ್ಲಿಗೂ ಸಂದು ವಿಶ್ವಮಾನ್ಯರಾಗಿರುವ ಶರಣರ ಚರಿತ್ರೆಗಳನ್ನು ಹೆಣೆಯುವುದರಲ್ಲಿ ಕಾವ್ಯಾನಂದರು ಕಲಾವಂತಿಕೆಯನ್ನು ಮೆರೆ ದಿದ್ದಾರೆ. ಮನೆತನದಿಂದ ಮೈಮನಗೂಡಿ ಬಂದ ಸಂಸ್ಕಾರ, ಸ್ವಾಧ್ಯಾಯದ ತೇಜ, ಸ್ವಾನುಭಾವದ ಶುಭ್ರತೆ, ಶುದ್ಧಾಚರಣೆ, ಭಕ್ತಿ ಹೃದಯ, ಈ ಶಕ್ತಿಗಳೇ ಮೇಳವಿಸಿ ನಿಂತು ಶರಣ ಚರಿತಾಮೃತ ಮಹಾಸಾಗರವನ್ನು ಎದೆಗೆ ತುಂಬಿ ಕೊಳ್ಳುವ ಸ್ಥೈರ್ಯವನ್ನು ಕಾವ್ಯಾನಂದರಿಗೆ ತಂದು ಕೊಟ್ಟಿವೆ. ಕಾವ್ಯ' ಪುರಾಣ, ಚರಿತ್ರೆ, ವಚನ, ಜನಪದ ಕಲ್ಪನೆ ಹೀಗೆ ಹಲವಾರು ಮೂಲಗಳಿಂದ ಶರಣರ ಜೀವನ ಚರಿತ್ರೆಗೆ ಸಾಮಗ್ರಿ ಸಂಗ್ರಹಿಸುವ ತಪಸ್ಸನ್ನೇ ಸಿದ್ಧಯ್ಯನವರು ಮಾಡಿದ್ದಾರೆ. ಆದುದರಿಂದಲೇ ಈ ಕೃತಿ ಸಫಲ ಕೃತಿಯಾಗಿದೆ; ಮಹತ್ ಕೃತಿಯಾಗಿದೆ. ಕನ್ನಡದ ನೆಲದಲ್ಲಿ, ಕನ್ನಡದ ನುಡಿಯಲ್ಲಿ ತೆರೆದ ಈ ಶರಣ ಜೀವನ ಪಥ, ಭಾರತೀಯರ ಉನ್ನತ ಜೀವನ ಪಥವಾಗಿ ತನ್ಮೂಲಕ ಮಾನವ ಜೀವನದ ಮಹಾ ಪಥವಾಗಿ ಅಜರಾಮರವಾಗಿ ನಿಂತಿದೆ.

ಇಲ್ಲಿಯವರೆಗಿನ ಕವಿ, ಕಾವ್ಯಗಳ ವಿವರಣೆ, ವಿವೇಚನೆ ಕಾವ್ಯಾನಂದರ ಆನಂದಮಯ ಕೃತಿ ಲೋಕವನ್ನು ಕಾಣಲು ಕೊರೆದ ಒಂದು ಕಿರು ಬೆಳಕಿಂಡಿ ಮಾತ್ರ. ಸರಳತೆ, ಸೌಜನ್ಯ, ಹೃದಯ ವೈಶಾಲ್ಯ, ಸ್ನಿಗ್ಧ ಸ್ನೇಹ, ಮುಗ್ಧ ಮನೋಭಾವ, ಸರಸ ಮಾತು, ನಿರರ್ಗಳ ವಾಕ್‌ಚಾತುರ್ಯ ಇವುಗಳ ಮೊತ್ತ ವಾದ ಇವರ ವ್ಯಕ್ತಿತ್ವ ಕಾವ್ಯದಷ್ಟೇ ಹೃದಯಾನಂದಕರ. ಆಡಳಿತದ ದರ್ಪ ಇವರಲ್ಲಿ ಎಳ್ಳನಿತೂ ಇಲ್ಲ. ಇಂಥ ಅಪರೂಪ ವ್ಯಕ್ತಿತ್ವ, ಇನ್ನೊಂದು ಬಗೆ ಯಲ್ಲಿ ಕಾವ್ಯದಂತೆ ಜೀವನಕ್ಕೆ ಪ್ರೇರಕ. ಇಂತು ಕವಿತ್ವ. ವ್ಯಕ್ತಿತ್ವ ಎರಡ ರಿಂದಲೂ ಕನ್ನಡಿಗರ ಮನಸೂರೆಗೊಂಡಿದ್ದಾರೆ ಕಾವ್ಯಾನಂದರು. ಅವರ ಗ್ರಂಥಗಳ ಹಿರಿಮೆಯನ್ನು ಶ್ರೀಗಳಾದ ದ. ರಾ. ಬೇಂದ್ರೆ, ಕುವೆಂಪು, ಪು. ತಿ. ನರಸಿಂಹಾಚಾರ್ಯ ಮುಂತಾದ ಮೊದಲ ಮನ್ನಣೆಯ ಕವಿವರೇಣ್ಯರೇ ಮುನ್ನುಡಿ, ವಿಮರ್ಶೆಗಳಿಂದ ಕೊಂಡು ಕೊನೆದಿರುವಾಗ ಹೊಸಗನ್ನಡ ಸಾಹಿತ್ಯ ಲೋಕದ ತೇಜೋಪೂರ್ಣ ನಕ್ಷತ್ರ ಕಾವ್ಯಾನಂದರು ಎನ್ನುವುದರಲ್ಲಿ ಅತಿಶ ಯೋಕ್ತಿಯಿಲ್ಲ.